ನಿಯಮ 351ರ ಮೇರೆಗೆ ಚರ್ಚಿಸಲಾದ ವಿಷಯಗಳು

(ಅ) ರೇಷ್ಮೆ ಇಲಾಖೆಯಲ್ಲಿ ಚಿಟ್ಟೆ ಪರೀಕ್ಷಕರ ಸಾರಸಗಟು ವರ್ಗಾವಣೆ.

ಶ್ರೀ ಎಸ್. ಜಿ. ಮುದ್ದುಹನುಮೇಗೌಡ (ಕುನಿಗಲ್) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯ ರೇಷ್ಮೆ ಕೃಷಿಯಲ್ಲಿ ಮೈಸೂರು ಬಿತ್ತನೆ ವಲಯ ಕುಣಿಗಲ್ ತಾಲ್ಲೂಕು, ತುಮಕೂರು ತಾಲ್ಲೂಕು ಮತ್ತು ಮಾಗಡಿ ತಾಲ್ಲೂಕಿನಲ್ಲಿ ಹಿಂದೆ 1991-1992ನೇ ಸಾಲಿನಲ್ಲಿ ಒಂದು ಭಯಾನಕ ಗಂಟು ರೋಗ ಬಂದು, ಈ ರೇಷ್ಮೆ ಕೃಷಿಗೆ ಬಹಳ ಹಾನಿಯನ್ನು ಉಂಟುಮಾಡಿತು. ಸುಮಾರು 236 ಜನ ಚಿಟ್ಟೆ ಪರೀಕ್ಷಕರು ಅದನ್ನು ಬಹಳ ನಿಯಂತ್ರಣ ಮಾಡಲು ಸಹಾಯ ಮಾಡಿದರು ಈ (ಸಿ) ಗ್ರೂಪ್ ನೌಕರರೇನು ಚಿಟ್ಟೆ ಪರೀಕ್ಷಕರಾಗಿ ಯಾವ ಒಂದು ಹುಳು ಪರೀಕ್ಷೆ ಮಾಡುವುದರಲ್ಲಿ ಪರಿಣತಿಯನ್ನು ಹೊಂದಿದ್ದರು. ಆ ನೌಕರರನ್ನು ಇವತ್ತು ಸ್ಟ್ಯಾಟಿಸ್ಟಿಕಲ್ ಡಿಪಾರ್ಟ್‌ಮೆಂಟಿಗೆ ವರ್ಗಾವಣೆ ಮಾಡಿದ್ದಾರೆ. ಇದರಿಂದ ಏನಾಗಿದೆ ಎಂದರೆ ಪುನಃ ಒಂದು ಗಂಟು ರೋಗ ಕಾಣಿಸಿಕೊಂಡರೆ, ಅದನ್ನು ನಿಯಂತ್ರಣ ಮಾಡುವುದಕ್ಕಾಗುವುದಿಲ್ಲ ಎನ್ನುವ ಪರಿಸ್ಥಿತಿ ಆಗಿದೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, 236 ಜನ (ಸಿ) ಗ್ರೂಪ್ ನೌಕರರು ಚಿಟ್ಟೆ ಪರೀಕ್ಷಕರಾಗಿ ಪರಿಣತಿ ಹೊಂದಿ ಇವತ್ತು ಮೈಸೂರು ಬಿತ್ತನೆ ವಲಯದಲ್ಲಿ ಕೆಲಸಮಾಡುತ್ತಿದ್ದಾರೆ, ಅವರ ವರ್ಗಾವಣೆಯನ್ನು ರದ್ದು ಮಾಡಿ, ಅವರನ್ನು ಅಲ್ಲಿಯೇ ಉಳಿಸಿ ಈ ಒಂದು ಭಯಾನಕ ರೋಗವನ್ನು ನಿಯಂತ್ರಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವರದೇಗೌಡ (ರೇಷ್ಮೆ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ ಸುಪ್ರೀಮ್ ಕೋರ್ಟ್ ಆದೇಶದ ಮೇರೆಗೆ ಕುಣಿಗಲ್ ತಾಲ್ಲೂಕಿನಲ್ಲಿ ಇದ್ದ 88 ಜನ (ಸಿ) ಗ್ರೂಪ್ ನೌಕರರನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾವಣೆ ಮಾಡಿದೆ. ಸಂಖ್ಯಾ ರೀತ್ಯಾ 10 ವರ್ಷ ಆದಮೇಲೆ ಅವರನ್ನು ಖಾಯಂ ಮಾಡಿ ಬೇರೆ ಬೇರೆ ಇಲಾಖೆಗಳಿಗೆ ಅಂದರೆ ಡೆಪ್ಯೂಟಿ ಕಮೀಷನರ್‌ವರು ಯಾವ ಯಾವ ಇಲಾಖೆಗಳಿಗೆ ಕೇಳಿದ್ದರು ಅಲ್ಲಿಗೆ ಹಾಕಿದ್ದೇವೆ. ಈಗಾಗಲೇ 20 ಜನರನ್ನು ಬೇರೆ ಕಡೆಯಿಂದ ಅಲ್ಲಿಗೆ ವರ್ಗಾವಣೆ ಮಾಡಿಕೊಟ್ಟಿದ್ದೇವೆ. 376 ಹುದ್ದೆಗಳ ಬಗ್ಗೆ ಮೊನ್ನೆ ತಾನೇ ಆದೇಶ ಹೊರಡಿಸಲಾಗಿದೆ. ಆ ಆದೇಶ ಬಂದಮೇಲೆ ಒಂದು ವಾರದೊಳಗೆ ಆ ಹುದ್ದೆಯನ್ನು ತುಂಬುತ್ತೇವೆ.

(ಆ) ಬಳ್ಳಾರಿ ಮತ್ತು ರಾಯಚೂರುಗಳಲ್ಲಿ ಹತ್ತಿ ಬೆಳೆ ಸಂಶೋಧನೆ ಕುರಿತು

ಶ್ರೀ ಅಲ್ಲಂ ವೀರಭದ್ರಪ್ಪ (ಹುರುಗೋಡು) : ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷಿ ಸಚಿವರಲ್ಲಿ ಕೇಳುತ್ತೇನೆ ಈಗಾಗಲೇ ತಮಗೆ ತಿಳಿದಂತೆ ಬಳ್ಳಾರಿ ಮತ್ತು ರಾಯಚೂರು ಎರಡು ಜಿಲ್ಲೆಗಳಲ್ಲಿ ನಮ್ಮ ದೇಶ 1/3ಭಾಗ ಹತ್ತಿಯನ್ನು ಬೆಳೆಯುತ್ತಾರೆ. ಇಲ್ಲಿ ಕಳೆದ ಸುಮಾರು 20 ವರ್ಷಗಳಿಂದ ತುಂಗಭದ್ರಾ ಅಣೆಕಟ್ಟು ಬಂದಮೇಲೆ ಇಲ್ಲಿ ಹತ್ತಿಬೆಳೆ ಪ್ರಮುಖವಾದ ಬೆಳೆಯಾಗಿದೆ. ನಾವು ಪ್ರತಿ ವರ್ಷ ಕೂಡ ಈ ಬೆಳೆಯ ರೀಸರ್ಚ್ ಬಗ್ಗೆ ಪ್ರೈಸ್ ಬಗ್ಗೆ ಮಾತನಾಡುತ್ತಿದ್ದೇವೆ. ಕಾಟನ್ ಕಾರ್ಪೊರೇಷನ್ ಆಫ್ ಇಂಡಿಯಾದವರು ಒಂದು ಸಣ್ಣ ಬ್ರಾಂಚ್ ಆಫೀಸ್ ಓಪನ್ ಮಾಡಿ ಇಲ್ಲಿ ಖರೀದಿ ಮಾಡುತ್ತಾ ಇಲ್ಲ.